KARNATAKA LEGISLATIVE ASSEMBLY RESEARCH AND REFERENCE BRANCH

PAPER CLIPPINGS

DEPARTMENT / SUBJECT:

NAME OF THE NEWS PAPER: ವಿಶ್ವವಾಣಿ

DATE : 10/03/2020

## ಕಾಗೇರಿ ವಿರುದ್ಧ ರಾಮಲಿಂಗಾರೆಡ್ಡಿ ಅಸಮಾಧಾನ | ಸ್ಪೀಕರ್ ಜತೆ ವಾಗ್ವಾದದ ಬಳಿಕ ಸದನಕ್ಕೆ ಬಂದಿಲ್ಲ

# ಸ್ಪೀಕರ್ ಬದಲಾಗುವ ತನಕ ರೆಡ್ಡಿ ಮೌನವ್ರತ?

10/3/2020

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು





ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚಿಸಲು ಅವಕಾಶ ನೀಡಲಿಲ್ಲ ಎನ್ನುವ ಕಾರಣಕ್ಕೆ ರಾಮಲಿಂಗಾರೆಡ್ಡಿ ಹಾಗೂ ಸ್ಪೀಕರ್ ಕಾಗೇರಿ ನಡುವಿನ ವಾಗ್ವಾದ ಇದೀಗ ಇಬ್ಬರ ನಡುವೆ ವೈಯಕ್ತಿಕ ಪ್ರತಿಷ್ಠೆಗೆ ತಿರುಗಿದೆ.

ವಿಧಾನಸಭೆಯಲ್ಲಿ ಯಾರು ಮಾತನಾಡಬೇಕು ಎನ್ನುವುದನ್ನು ನಿರ್ಧರಿಸುವುದು ತಮ್ಮ ಪರಮಾಧಿಕಾರ ಎನ್ನುವ ಮಾತನ್ನು ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಕ್ಕೆ, ತೀವ್ರ ಆಕ್ಷೇಪವ್ಯಕ್ತಪಡಿಸಿದ್ದ ಮಾಜಿ ಸಚಿವ ರಾಮಲಿಂಗಾರೆಡ್ಡಿ ಅವರು, ಸದನದಲ್ಲಿಯೇ ಕಾಗೇರಿ ಅವರನ್ನು ತರಾಟೆಗೆ ತಗೆದುಕೊಂಡಿದ್ದರು.

ಸಹಜವಾಗಿ ಯಾರ ವಿರುದ್ಧವೂ ಮಾತನಾಡದ ರಾಮಲಿಂಗಾರೆಡ್ಡಿ ಅವರು ಕಾಗೇರಿ ವಿರುದ್ಧ ಮುಗಿಬಿದ್ದದ್ದು ಸ್ವತಃ ಕಾಂಗ್ರೆಸ್ ನಾಯಕರಿಗೆ ಅಚ್ಚರಿಯಾಗಿತ್ತು. ತಮಗಿಂತ ಕಿರಿಯ ತಮ್ಮ ವಿರುದ್ಧ ಈ ರೀತಿ ಮಾತನಾಡಿದ್ದು ತಪ್ಪು ಎಂದು ಈ ರೀತಿ ವಾಗ್ವಾಳಿ ನಡೆಸಿ, ಅವಕಾಶ ನೀಡಿದರೂ ಮಾತನಾಡದೇ ಸಭಾತ್ಯಾಗ ಮಾಡಿದ್ದರು. ಅಂದಿನಿಂದ ಇಲ್ಲಿಯವರೆಗೆ ವಿಧಾನಸಭೆಯತ್ತ ರಾಮಲಿಂಗಾರೆಡ್ಡಿ ಅವರು ತಲೆಹಾಕಿರಲಿಲ್ಲ. ಇದಕ್ಕೆ ಕಾರಣ ಹುಡುಕಿದಾಗ, ಸ್ಪೀಕರ್ ಮೇಲಿನ ಕೋಪಕ್ಕೆ ಈ ರೀತಿ ಮಾಡಿದ್ದಾರೆ ಎನ್ನಲಾಗಿದೆ.

ವಿಶ್ವವಾಣಿ ವಿಶೇಷ

ತಮ್ಮ ಗೈರಿನ ಬಗ್ಗೆ ಆಪ್ತರೊಂದಿಗೆ ಮಾತನಾಡಿರುವ ರಾಮಲಿಂಗಾರೆಡ್ಡಿ ಅವರು, ಸಾಂವಿಧಾನಿಕ ಪೀಠದಲ್ಲಿ ಕೂತ ಮಾತ್ರಕ್ಕೆ ಹಿರಿಯರನ್ನು ಗೌರವಿಸಬಾರದು ಎನ್ನುವ ನಿಯಮವಿಲ್ಲ. ಜೆಡಿಎಸ್‌ನ ವೀರಭದ್ರಯ್ಯ ಬಳಿಕ ನನಗೆ ಮಾತನಾಡಲು ಅವಕಾಶ ನೀಡಿ ಎಂದಷ್ಟೆ ಹೇಳಿದ್ದೆ. ಆದರೆ ಅವರು ಕಾನೂನು ಕ್ರಮ ಎಂದೆಲ್ಲ ಹೇಳಿದ್ದರಿಂದ ನಾನು ಮಾತನಾಡಿದ್ದೆ. ಆದ್ದರಿಂದ ಇನ್ನು ಮುಂದೆ ಅವರು ಮಾತನಾಡಲು ಅವಕಾಶ ನೀಡಿದರೂ ನಾನು ಮಾತನಾಡುವುದು ಬೇಡ ಎನ್ನುವ ನಿರ್ಧಾರಕ್ಕೆ ಬಂದಿದ್ದೇನೆ ಎಂದು ಹೇಳಿಕೊಂಡಿದ್ದಾರೆ.

### ಮೌನವತ್ರ ಸಾಧ್ಯತೆ?

**ರಾಮಲಿಂಗಾರೆಡ್ಡಿ ಅವರು ಕಾಂಗ್ರೆಸ್‌ನ ಹಿರಿಯ ಶಾಸಕರಾಗಿರುವುದರಿಂದ ಸದನಕ್ಕೆ ಹಾಜರಾಗದಿದ್ದರೆ ಕೆಟ್ಟ ಸಂದೇಶ ರವಾನೆಯಾಗಲಿದೆ ಎನ್ನುವ ಮಾತನ್ನು ಕಾಂಗ್ರೆಸ್ ನಾಯಕರು ಹೇಳಿರುವುದರಿಂದ, ಸಭೆಗೆ ಹಾಜರಾಗಲು ರಾಮಲಿಂಗಾರೆಡ್ಡಿ ಒಪ್ಪಿದ್ದಾರೆ. ಮಂಗಳವಾರದಿಂದ ರಾಮಲಿಂಗಾರೆಡ್ಡಿ ಸಭೆಗೆ ಹಾಜರಾಗಲು ನಿರ್ಧರಿಸಿದ್ದಾರೆ. ಆದರೆ ಕಾಗೇರಿ ಅವರು ಈ ವೇಳೆ ಮಾತನಾಡಲು ಅವಕಾಶ ನೀಡಿದರೂ ಮಾತನಾಡುವುದು ಬೇಡ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.**

ಸದನಕ್ಕೆ ಬರುವುದಿಲ್ಲ!: ರಾಜ್ಯದ ಬಜೆಟ್ ದಿನವೂ ವಿಧಾನಸಭೆಯತ್ತ ಸುಳಿಯದ ರಾಮಲಿಂಗಾರೆಡ್ಡಿ ಅವರು, ಸ್ಪೀಕರ್ ಸ್ಥಾನದಿಂದ ಕಾಗೇರಿ ಅವರು ಬದಲಾಗುವ ತನಕ ತಾವು ಅಧಿವೇಶನಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರಂತೆ. ಅದಕ್ಕಾಗಿಯೇ ಬಜೆಟ್ ಅಧಿವೇಶನದಲ್ಲಿ ಹಲವು ಶಾಸಕರು ಭಾಗವಹಿಸಿದರೂ, ರಾಮಲಿಂಗಾರೆಡ್ಡಿ ಮಾತ್ರ ಕಾಣಿಸಿಕೊಂಡಿಲ್ಲ. ಈ ಬಗ್ಗೆ ಸಿದ್ದರಾಮಯ್ಯ ಅವರಿಗೂ ಮಾಹಿತಿ ರವಾನಿಸಿರುವ ರೆಡ್ಡಿ, ಅವರು ಇರುವ ತನಕ ನಾನು ಸದನಕ್ಕೆ ಬರುವುದಿಲ್ಲ. ಕ್ಷೇತ್ರದ ಕೆಲಸವನ್ನು ಮಾಡಿಕೊಂಡಿರುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ ಎನ್ನಲಾಗಿತ್ತು. ಆದರೆ, ಪ್ರಮುಖ ವಿಷಯದ ಚರ್ಚೆ ನಡೆಯುವಾಗ ಪಕ್ಷದ ಪರವಾಗಿ ಹಿರಿಯರ ಶಾಸಕರು ಇರಬೇಕು ಎನ್ನುವ ಮಾತನ್ನು ಸಿದ್ದರಾಮಯ್ಯ ಹೇಳಿದ್ದಾರೆ. ಸಿದ್ದರಾಮಯ್ಯ ಸೇರಿದಂತೆ ಪ್ರಮುಖ ನಾಯಕರ ಒತ್ತಡಕ್ಕೆ ಮಣಿದಿರುವ ರಾಮಲಿಂಗಾರೆಡ್ಡಿ, ಅವರು ಸದನಕ್ಕೆ ಬರುವುದಾಗಿ ಕೊನೆಯಲ್ಲಿ ಒಪ್ಪಿಕೊಂಡರೂ, ಕಾಗೇರಿ ಅವರು ಸ್ಪೀಕರ್ ಆಗಿರುವ ತನಕ ಮಾತನಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.